# ಶಿಹಾಬುದ್ದೀನ್ ಕವಿತೆಗಳು

ಕನ್ನಡಕ್ಕೆ: ತೇಜಶ್ರೀ ಜ.ನಾ.





1

**ಅಕ್ಕ–ಪಕ್ಕ**

ಹೂವಿನ ಚಿತ್ರ ಬಿಡಿಸಲು ಯತ್ನಿಸಿದೆ;
ಮುಳ್ಳುಕಂಟಿಯ ನಡುವೆ ಸಿಕ್ಕು
ನನ್ನ ಕೈ ರಕ್ತ ಸುರಿಸುತ್ತಿದೆ.

2

**ಕಳೆದುಹೋದ ಮಗು**

ಅಕ್ಷರಗಳ ಊಟ ಕೊಟ್ಟು
ತೆರಳಿದ ತಾಯೀ,
ಅದರ ಹಿಂದೆ ಕುಳಿತಿದ್ದ ಮಗುವನ್ನು
ನೋಡಲೇ ಇಲ್ಲವಲ್ಲ ನೀನು.

3

**ದೇವರು**

ನನಗೆ ಮುತ್ತಿಡದೆಯೇ
ಹೊರಟು ಹೋದ,
ಹೊಸ ಲೋಕಗಳನು ಸೃಷ್ಟಿಸಲು.

4

**ಕಣ್ಣೀರ ಹನಿಗಳು**

ಯಾರೋ ಎಸೆದ ಬಂಡೆತುಂಡುಗಳು.
ಕರಗಿ ನನ್ನ ಕಣ್ಣು
ಜಾರಿಸುತ್ತವೆ ಅವನ್ನು
ಭೂಮಿಗೆ.

5

**ನೀನು**

ಪದದಲ್ಲಿ ಮಿಂದು
ಲಾವಣ್ಯವತಿಯಾದಾಗ ನೀನು,
ಹೀರಿಕೊಳ್ಳುವೆ ನಿನ್ನನ್ನು ನಾನು
ನನ್ನನ್ನೇ ಎರಡಾಗಿ ಸೀಳಿಕೊಂಡು.